156ನೇ ಸೂ-330 = (69)

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ಇವರು ನಿಯಮ 330 ಮೇರೆಗೆ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ

**ಸೂಚನೆ :-**

ರೆವಿನ್ಯೂ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಮೀನಿನ ವಿಧಗಳನ್ನು ಯಾವ ರೀತಿ ಟಿಪ್ಪು ಸುಲ್ತಾನ್ ಕಾಲದಿಂದ ಇಲ್ಲಿಯವರೆಗೂ ವಿಂಗಡಿಸಲಾಗಿರುತ್ತದೆ ಹಾಗೂ ಯಾವ ರೀತಿ ಯಾವ ವಿವಿಧ ಜನರಿಗೆ ಮಂಜೂರು ಮಾಡಲಾಗಿರುತ್ತದೆ. ಹಂಗಾಮಿ ಉಳುಮೆ ಚೀಟಿ ಮತ್ತು ಖಾಯಂ ಉಳುಮೆ ಚೀಟಿ ಅಂದರೆ ಏನು, ಇವುಗಳ ವ್ಯತ್ಯಾಸವೇನು, ಜಿಎಂಎಫ್ ಯೋಜನೆ ಹಾಗೂ ಇತರೆ ಯೋಜನೆಗಳಾವುವು ಹಂಗಾಮಿ ಚೀಟಿಯಡಿ ಮಂಜೂರಾದ ಜಮೀನುಗಳನ್ನು ಖಾಯಂ ಮಾಡುವ ಬಗೆ ಹೇಗೆ ಎಂಬುದರ ಬಗ್ಗೆ ಸಾರ್ವಜನಿಕರು ನಮ್ಮನ್ನು ಕೇಳುತ್ತಿರುವುದರಿಂದ ಇದರ ಬಗ್ಗೆ ನಮಗೆ ಸರಿಯಾದ ಮಾಹಿತಿ ಇಲ್ಲದೆ ಇರುವುದರಿಂದ ಇದರ ಸಂಪೂರ್ಣ ಮಾಹಿತಿಯನ್ನು ನೀಡಬೇಕೆಂದು ಕೊರುತ್ತಾ ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು ತಾವರಕೆರೆ ಹೋಬಳಿ ಡಿ. ನಾರಾಯಣ ಪುರ ಗ್ರಾಮದ ಸರ್ವೇ ನಂ 24 ರಲ್ಲಿ ಬ್ಲಾಕ್ 5 ರಲ್ಲಿ ಪಾಪಣ್ಣ ಬಿನ್ ನರಸಿಂಹಯ್ಯ ಅವರಿಗೆ 1 ಎಕರೆ 25 ಗುಂಟೆ ಜಮೀನು ಮಂಜೂರಾಗಿದ್ದು, ಸದರಿಯವರಿಗೆ ಇನ್ನು ಸಾಗುವಳಿ ಚೀಟಿ ನೀಡದಿರುವುದಕ್ಕೆ ಕಾರಣಗಳೇನು ಎಂಬುದನ್ನು ತಿಳಿಸುತ್ತಾ ಇವರಿಗೆ ಸಾಗುವಳಿ ಚೀಟಿ ನೀಡಬೇಕೆಂದು ಕೋರುತ್ತಾ (ಆರ್.ಯು.ಸಿ) ಹಂಗಾಮಿ ಸಾಗುವಳಿ ಚೀಟಿಗಳ ಬಗ್ಗೆ ಸರ್ಕಾರ ಕ್ರಮ ಕೈಗೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಸದನದಲ್ಲಿ ಮಂಡಿಸ ಬಯಸುತ್ತೇನೆ.

**ಹೇಳಿಕೆ:-**

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಪಟ್ಟಂತೆ ಈ ಹಿಂದಿನಿಂದಲೂ ಇರುವಂತಹ ಸರ್ಕಾರಿ ಜಮೀನುಗಳು ಈ ಕೆಳಕಂಡಂತೆ ವಿಂಗಡಿಸಲಾಗಿರುತ್ತದೆ.

1. ಸರ್ಕಾರಿಗೋಮಾಳ, 2) ಹುಲುಬನ್ನಿ, 3) ಕೆರೆ, 4) ಕಟ್ಟೆ, 5) ಹಳ್ಳ, 6) ಬಂಡೆ, 7) 'ಬಿ'ಖರಾಬು, 8) ಸ್ಮಶಾನ, 9) ಗುಂಡುತೋಪು, 10) ಸರ್ಕಾರಿ ತೋಪು, 11) ಕಾಲುದಾರಿ, 12) ಬಂಡಿದಾರಿ, 13) ಸರ್ಕಾರಿ ಛತ್ರ, 14) ಹದಿಗಿಡದ ಹಳ್ಳ, 15) ಸರ್ಕಾರಿ ಓಣಿ ಮುಂತಾದವುಗಳು.

ಬೆಂಗಳೂರು ನಗರ ಜಿಲ್ಲೆಯಲ್ಲಿ ಈ ಹಿಂದಿನಿಂದಲೂ ದರಖಾಸ್ತು, ಮೂಲಕ, ಹಂಗಾಮಿ ಸಾಗುವಳಿ ಮೂಲಕ, GROW MORE FOOD ಯೋಜನೆಯ ಮೂಲಕ, ಬಗರ್ ಹುಕುಂ ಸಾಗುವಳಿ ಮೂಲಕ ಸಾಕಷ್ಟು ಜಮೀನು ಇಲ್ಲದಂತಹ/ಬಡ ಕುಟುಂಬದ ರೈತರಿಗೆ ಅರ್ಹತೆಯ ಆಧಾರದ ಮೇರೆಗೆ ಜಮೀನು ಹಂಚಿಕೆಯಾಗಿರುತ್ತದೆ.

1949 ರಿಂದ 1954ನೇ ಸಾಲಿನಲ್ಲಿ ಬರಗಾಲ ಇದ್ದ ಸಂದರ್ಭದಲ್ಲಿ, ಕಡು ಬಡವ ರೈತರುಗಳು ಹೆಚ್ಚು ಬೆಳೆ ಬೆಳೆಯುವ ಉದ್ದೇಶದಿಂದ ಸರ್ಕಾರಿ ಜಮೀನುಗಳನ್ನು G.M.F Scheme ರಡಿ ಮತ್ತು ಹಂಗಾಮಿ ಸಾಗುವಳಿ ಚೀಟಿಯನ್ನು ನೀಡಲಾಗಿರುತ್ತದೆ. (Mysore Land Revenue code ರಡಿ) ಇಂತಹ ಸಾಗುವಳಿ ಚೀಟಿಯು ಕೇವಲ ತಾತ್ಕಾಲಿಕ ಮಂಜೂರಾತಿ ಪ್ರಕ್ರಿಯೆಯಾಗಿರುತ್ತದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಜಾರಿಗೆ ಬಂದ ನಂತರದಲ್ಲಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ-23(2)ರನ್ವಯ "ಈ ನಿಯಮ ಜಾರಿಗೆ ಬಂದ ತರುವಾಯ ಭೂಮಿಗಳನ್ನು ಸಾಗುವಳಿಗಾಗಿ

ಹಂಗಾಮಿಯಾಗಿ ಕೊಟ್ಟಿದ್ದರೆ ಮತ್ತು ಗುತ್ತಿಗೆದಾರನು ಗುತ್ತಿಗೆಯ ಎಲ್ಲಾ ಷರತ್ತುಗಳನ್ನು ಪೂರೈಸಿದ್ದರೆ ಗುತ್ತಿಗೆದಾರನು ಭೂ ರಹಿತ ವ್ಯಕ್ತಿಯಾಗಿದ್ದರೆ ಅಥವಾ ಸಾಕಷ್ಟು ಭೂಮಿಯಿಲ್ಲದವನಾಗಿದ್ದರೆ, ಡೆಪ್ಯೂಟಿ ಕಮೀಷನರು ಗೊತ್ತುಮಾಡಬಹುದಾದ ಬೆಲೆಯನ್ನು ಸಂದಾಯ ಮಾಡಿದ ಮೇಲೆ ಅಂಥ ಭೂಮಿಯನ್ನು ಗುತ್ತಿಗೆದಾರನಿಗೆ ಮಂಜೂರು ಮಾಡಬಹುದು." ಎಂದು ಇರುತ್ತದೆ.

ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಂದ ವರದಿ ಪಡೆಯಲಾಗಿರುತ್ತದೆ ಅದರಂತೆ ಬೆಂಗಳೂರು ದಕ್ಷಿಣ ತಾಲ್ಲೂಕು ತಾವರಕೆರೆ ಹೋಬಳಿ ಡಿ.ನಾರಾಯಣಪುರ ಗ್ರಾಮದ ಸ.ನಂ 24 ರ ಮೂಲತಃ ಸರ್ಕಾರಿ ಗೋಮಾಳದ ಜಮೀನಾಗಿದ್ದು. ಮಾನ್ಯ ತಹಶೀಲ್ದಾರ್ ಬೆಂಗಳೂರು ತಾಲ್ಲೂಕು ರವರ ಅಧಿಕೃತ ಜ್ಞಾಪನ: LND/CR/473/91-92 09-02-99 ರಂತೆ ಪಾಪಣ್ಣ ಬಿನ್ ನರಸಿಂಹಯ್ಯ ರವರಿಗೆ 1-25 ಎ/ಗು ಜಮೀನು ಮಂಜೂರಿಯಾಗಿದ್ದು, ಅದರಂತೆ ಖಾತೆಯೂ ಸಹ ಆಗಿರುತ್ತದೆ ತದನಂತರ ಪೋಡಿಯಾಗಿ 38/1,2,3 ಎಂದು ಹೊಸ ಸ.ನಂ ಆಗಿ ಕ್ರಯ ವಿಕ್ರಯಗಳಾಗಿ ಹಾಲಿ 38/1 ರಲ್ಲಿ 1-31 ಎ/ಗು 0-01 ಗುಂಟೆ ಖರಾಬ್ ಜಾತ ಉಳಿಕೆ 1-30 ಎ/ಗು ಹೆಚ್ ಜಿ ಬೋರೆಗೌಡ ಬಿನ್ ಲೇ|| ಗಂಗಣ್ಣ, ಬಿ ಜಾನಕಮ್ಮ ಕೋಂ ಹೆಚ್ ಜಿ ಬೋರೇಗೌಡ 1-30 ಎ/ಗು ಜಂಟಿಯಾಗಿ, ಸ.ನಂ 38/2 ರಲ್ಲಿ 0-05.12 ಗುಂಟೆ, 0.08 ಗುಂಟೆ ಖರಾಬ್ ಜಾತ ಉಳಿಕೆ 0-05.04 ಗುಂಟೆ ಆಶಾ ಸಿ ಆರ್ ಕೋಂ ಕುಮಾರ್ ಸ ವಿ ರವರಿಗೆ, ಸ.ನಂ 38/3 ರಲ್ಲಿ 0-09 ಗುಂಟೆ ಉಮೇಶ್ ಜಿ ಬಿನ್ ಗಿರಿಯಪ್ಪ ರವರಿಗೆ, ಸ.ನಂ 38/4 ರಲ್ಲಿ 0-06 ಗುಂಟೆ 0-0.08 ಗುಂಟೆ ಖರಾಬ್ ಜಾತ ಉಳಿಕೆ 0-05.08 ಗುಂಟೆ ನರಸಿಂಹಯ್ಯ ಬಿನ್ ಲೇ|| ಪಾಪಣ್ಣ ಮತ್ತು ಸ.ನಂ 38/5 ರಲ್ಲಿ ಒಟ್ಟು 0-11.04 ಗುಂಟೆ, 0-01 ಗುಂಟೆ ಖರಾಬು ಜಾತ ಉಳಿಕೆ 0-10.04 ಗುಂಟೆ ಜಮೀನು ಭೈರಪ್ಪ ಬಿನ್ ಲೇ|| ಪಾಪಣ್ಣ ರವರ ಹೆಸರಿಗೆ ಖಾತೆ ದಾಖಲಾಗಿರುತ್ತದೆ.

ಈಗಾಗಲೇ ಖಾತೆ ಆಗಿ ಪೋಡಿಯಾಗಿ ಕ್ರಯ-ವಿಕ್ರಯ ಹಾಗೂ ವಿಭಾಗವಾಗಿರುತ್ತದೆ ಆದ್ದರಿಂದ ಮಂಜೂರಿಯಂತೆ ಖಾತೆ ಬದಲಾವಣೆ ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಸ್ಥಳ ಪರಿಶೀಲಿಸಲಾಗಿ ಡಿ.ನಾರಾಯಣಪುರ ಸ.ನಂ 24 ಸರ್ಕಾರಿ ಗೋಮಾಳದ ಜಮೀನಿನಲ್ಲಿ ಅರ್ಜಿದಾರರ ತಂದೆ ಅನುಭವದಲ್ಲಿರುವ ಜಮೀನು ಬಿ.ಬಿ.ಎಂ.ಪಿ ವ್ಯಾಪ್ತಿಯ 18 ಕಿ.ಮೀ ಒಳಗೆ ಬರುತ್ತದೆ.

ಕರ್ನಾಟಕ ಭೂ ಕಂದಾಯ ನಿಯಮ, 1966ರ 108(ಬಿ) ಹಾಗೂ 108(ಹೆಚ್) ರಂತೆ ನಿಗಧಿತ ಶುಲ್ಕವನ್ನು ಸರ್ಕಾರಕ್ಕೆ ಪಾವತಿ ಮಾಡಲು ಸೂಚಿಸಿರುವ ಮೇರೆಗೆ ಕಿಮ್ಮತ್ತು ಕಟ್ಟಿರುತ್ತೇವೆಂದು ತಿಳುವಳಿಕೆ ಪತ್ರವನ್ನು ಹಾಜರುಪಡಿಸಿರುತ್ತಾರೆ. ಈ ತಿಳುವಳಿಕೆ ಪತ್ರವು ಮೇಲ್ಕಂಡಂತೆ ಮಂಜೂರಾಗಿ ಖಾತೆಯಾಗಿ ನಂತರ ಪೋಡಿಯಾಗಿ ಕ್ರಯ ವಿಕ್ರಯ ವಿಭಾಗಗಳಾಗಿರುವ ಜಮೀನಿಗೆ ಸಂಬಂಧಪಟ್ಟದ್ದಾಗಿರುತ್ತದೆ.

ಆದ್ದರಿಂದ ಈ ಹಂತದಲ್ಲಿ ಅರ್ಜಿದಾರರು ಕೋರಿರುವಂತೆ ಕ್ರಮಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

**ಆರ್‌ಡಿ 160 ಎಲ್‌ಜಿಕ್ಯೂ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು